ನಿಯಮ-330
ಕ್ರ-52 ಹೊರಟ್ಟಿ

**ಮಾನ್ಯ ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿರವರು ಮಂಡಿಸಿರುವ ನಿಯಮ 330ರ ಸೂಚನೆಗೆ ಸರ್ಕಾರದ ಉತ್ತರ**

1996-97ನೇ ಸಾಲಿನಲ್ಲಿ ಕರ್ನಾಟಕ ಲೋಕಸೇವಾ ಆಯೋಗದ ಮೂಲಕ ನೇಮಕಾತಿ ಹೊಂದಿ. ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರುಗಳು ನಿರಂತರ 25-26 ವರ್ಷಗಳ ಕಾಲ ಒಂದೇ ಹುದ್ದೆಯಲ್ಲಿ ಸೇವೆ ಸಲ್ಲಿಸುತ್ತಿದ್ದು. ಕೆಲವರು ಇಲ್ಲಿಯವರಿಗೆ ಒಂದು ಮುಂಬಡ್ತಿಯಿಲ್ಲದೇ ವಯೋನಿವೃತ್ತಿ ಹೊಂದಿರುತ್ತಾರೆ. ಇನ್ನೂ ಹಲವರು ವಯೋನಿವೃತ್ತಿಯ ಅಂಚಿನಲ್ಲಿದ್ದು. ಮುಂಬಡ್ತಿಯಿಂದ ವಂಚಿತರಾಗುತ್ತಿರುವ ಸದರಿ ಉಪನ್ಯಾಸಕರಿಗೆ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಖಾಲಿ ಇರುವ 400 ಕ್ಕೂ ಹೆಚ್ಚು ಪ್ರಾಂಶುಪಾಲರ ರಿಕ್ತ ಸ್ಥಾನಗಳಿಗೆ ಹಂತ ಹಂತವಾಗಿ ಮುಂಬಡ್ತಿ ನೀಡುವ ವಿಷಯವನ್ನು ಸದನದಲ್ಲಿ ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಗಮನ ಸೆಳೆಯಬಯಸುತ್ತೇನೆ.

****************

ರಾಜ್ಯದ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಒಟ್ಟು 1220 ಪ್ರಾಂಶುಪಾಲರ ಹುದ್ದೆಗಳು ಮಂಜೂರಾಗಿದ್ದು, ಇದರಲ್ಲಿ ಪದವಿ ಪೂರ್ವ ಶಿಕ್ಷಣ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಪ್ರಾಂಶುಪಾಲರ ಹುದ್ದೆಗೆ ಉಪನ್ಯಾಸಕರ ವೃಂದದಿಂದ ಶೇ.75ರಷ್ಟು ಬಡ್ತಿಗೆ ಮತ್ತು ಶೇ.25ರಷ್ಟು ನೇರ ನೇಮಕಾತಿಗೆ ಮೀಸಲಿರಿಸಿದೆ. ಅದರಂತೆ, ಈ ಕೆಳಗಿನಂತೆ ವಿವರಿಸಲಾಗಿದೆ.

ಪದವಿ ಪೂರ್ವ ಶಿಕ್ಷಣ ಇಲಾಖೆಗೆ ಸಂಬಂಧಿಸಿದ ಪ್ರಾಂಶುಪಾಲರ ಹುದ್ದೆಗಳ ಮಾಹಿತಿ (ದಿನಾಂಕ: 17/09/2022 ರಲ್ಲಿದ್ದಂತೆ)

| ಗ್ರೂಪ್-ಎ (ಇತರೆ ಉಳಿಕೆ ವೃಂದ) (NKK) | | | | | | |
|---|---|---|---|---|---|---|
| ಹುದ್ದೆಗಳು | SANCTIONED | | WORKING | | VACANT | |
| | DR | PR | DR | PR | DR | PR |
| ಪ್ರಾಂಶುಪಾಲರು (ಇತರೆ ಉಳಿಕೆ ವೃಂದ) | 266 | 797 | - | 755 | 266 | 42 |
| ಒಟ್ಟು | 266 | 797 | - | 755 | 266 | 42 |

| ಗ್ರೂಪ್-ಎ (ಕಲ್ಯಾಣ ಕರ್ನಾಟಕ ರಾಜ್ಯ ವ್ಯಾಪಿ ಸ್ಥಳೀಯ ವೃಂದ) (KK) | | | | | | |
|---|---|---|---|---|---|---|
| ಹುದ್ದೆಗಳು | SANCTIONED | | WORKING | | VACANT | |
| | DR | PR | DR | PR | DR | PR |
| ಪ್ರಾಂಶುಪಾಲರು (ಕಲ್ಯಾಣ ಕರ್ನಾಟಕ ರಾಜ್ಯ ವ್ಯಾಪಿ ಸ್ಥಳೀಯ ವೃಂದ) | 39 | 118 | - | 98 | 39 | 20 |
| ಒಟ್ಟು | 39 | 118 | - | 98 | 39 | 20 |

| | | | | | | |
|---|---|---|---|---|---|---|
| ಒಟ್ಟು (NKK+KK) | 305 | 915 | - | 853 | 305 | 62 |

ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ 102 ಉಪನ್ಯಾಸಕರುಗಳಿಗೆ ದಿನಾಂಕ:30/10/2021 ಮತ್ತು 27/12/2021 ರ ಸರ್ಕಾರದ ಅಧಿಸೂಚನೆಗಳಲ್ಲಿ ಪ್ರಾಂಶುಪಾಲರ ಹುದ್ದೆಗೆ ಬಡ್ತಿ ನೀಡಲಾಗಿದೆ. ಇದರಲ್ಲಿ 1996ನೇ ಸಾಲಿನ ಬ್ಯಾಚಿನ ಉಪನ್ಯಾಸಕರುಗಳಿಗೂ ಸಹ ಪ್ರಾಂಶುಪಾಲರ ಹುದ್ದೆಗೆ ಬಡ್ತಿ ನೀಡಲಾಗಿದೆ. ಅದೇ ರೀತಿ 1997ನೇ ಸಾಲಿನ ಬ್ಯಾಚಿನ **ಇತರೆ ಉಳಿಕೆ ವೃಂದ** (NKK) ವೃಂದದ **62**

ಉಪನ್ಯಾಸಕರಿಗೆ ಪ್ರಾಂಶುಪಾಲರ ಹುದ್ದೆಗೆ ಬಡ್ತಿ ನೀಡಲಾಗಿದೆ ಮತ್ತು **ಕಲ್ಯಾಣ ಕರ್ನಾಟಕ ರಾಜ್ಯ ವ್ಯಾಪಿ ಸ್ಥಳೀಯ ವೃಂದ** (KK) ವೃಂದದ 40 ಉಪನ್ಯಾಸಕರಿಗೆ ಪ್ರಾಂಶುಪಾಲರ ಹುದ್ದೆಗೆ ಬಡ್ತಿ ನೀಡಲಾಗಿದೆ.

ಪ್ರಸ್ತುತ್ತ ಖಾಲಿ ಇರುವ ಪ್ರಾಂಶುಪಾಲರ ಹುದ್ದಗಳಲ್ಲಿ ಬಡ್ತಿಗೆ 62 ಹುದ್ದೆಗಳು ಮೀಸಲಿರುತ್ತವೆ **(ಇತರೆ ಉಳಿಕೆ ವೃಂದ(NKK) 42+ ಕಲ್ಯಾಣ ಕರ್ನಾಟಕ ರಾಜ್ಯ ವ್ಯಾಪಿ ಸ್ಥಳೀಯ ವೃಂದ (KK) 20).** ಸದರಿ ಹುದ್ದೆಗಳಿಗೆ ಉಪನ್ಯಾಸಕರ ವೃಂದದಿಂದ ಬಡ್ತಿ ನೀಡುವ ಕುರಿತಾಗಿ ಅರ್ಹರಿಂದ ವ್ಯಕ್ತಿಪೂರ್ವ ದಸ್ತಾವೇಜುಗಳನ್ನು ಪಡೆಯುವ ಪ್ರಕ್ರಿಯೆಯು ಪ್ರಗತಿಯಲ್ಲಿದೆ.

(ಬಿ.ಸಿ.ನಾಗೇಶ್)
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಹಾಗೂ ಸಕಾಲ ಸಚಿವರು

ಸಂಖ್ಯೆ: ಇಪಿ 202 ಡಿಜಿಡಬ್ಲ್ಯೂ 2022